





ಸುಬ್ಬಮ್ಮನ ಮನೆಯಲ್ಲಿ ಕಳ್ಳತನ ಆಗಿತ್ತು. ಆ ಬಗ್ಗೆ ದೂರು ಕೊಡಲು ಸುಬ್ಬಮ್ಮ ಪೊಲೀಸ್ ಸ್ಟೇಷನ್‌ಗೆ ಹೋಗಿದ್ದಳು.
ಸುಬ್ಬಮ್ಮ: ಸರ್ ನಮ್ಮ ಮನೆಯಲ್ಲಿ ಟಿ.ವಿ. ಒಂದನ್ನು ಬಿಟ್ಟು ಮಿಕ್ಕ ಎಲ್ಲಾ ಸಾಮಾನುಗಳು ಕಳ್ಳತನ ಆಗಿವೆ.
ಪೊಲೀಸ್: ಟಿ.ವಿ.ನ ಯಾಕೆ ಬಿಟ್ಟು ಹೋದ್ರು?
ಸುಬ್ಬಮ್ಮ: ಆ ಟೈಮ್‌ನಲ್ಲಿ ನಾನು ಸೀರಿಯಲ್ ನೋಡ್ತಿದ್ದೆ.

ಹುಡುಗ: ನಮ್ ಲವ್ ವಿಷ್ಯಾನ ಮನೆಯಲ್ಲಿ ಮೆಲ್ಲಗೆ ಹೇಳಿಬಿಟ್ಟೆ.
ಹುಡುಗಿ: ವ್ಹಾವ್, ಆಮೇಲ್ ಏನಾಯ್ತು?
ಹುಡುಗ: ಆಗೋದೇನು, ಮೆಲ್ಲಗೆ ಹೇಳಿದ್ರಿಂದ ಯಾರಿಗೂ ಕೇಳಿಸ್ಲಿಲ್ಲ. ಅದ್ಕೆ ಬಚಾವಾಗ್ಬಿಟ್ಟೆ.

ಗುಂಡ: ಡಾಕ್ಟ್ರೆ, ನನಗೆ ಮರೆವು ಜಾಸ್ತಿಯಾಗಿದೆ. ಅದರಿಂದ ಏನಾದರೂ ಹಾನಿ ಉಂಟಾಗಬಹುದೇ?
ಡಾಕ್ಟರ್: ಖಂಡಿತವಾಗಿ ನೀವು ಉಸಿರಾಡುವುದನ್ನು ಮರೆತರೆ ದೊಡ್ಡ ಹಾನಿಯೇ ಆಗಬಹುದು.

ಕೋದಂಡ: ನಿಮ್ ಹೋಟೆಲ್‌ನ ಪರ್ಮನೆಂಟ್ ಗಿರಾಕಿಗಳು ಯಾರು?
ನಂಜುಂಡ: ನೊಣಗಳು. ಯಾರ್ ಬರ್ಲಿ, ಬಿಡ್ಲಿ, ದುಡ್ ಇರ್ಲಿ, ಬಿಡ್ಲಿ, ನೋಣಗಳು ಮಾತ್ರ ಬರ್ತಾನೆ ಇರ್ತವೆ.

ಹೆಂಡತಿ: ನಿಮ್ಮ ಸಂಬಂಧಿಕರ ಹತ್ರ ನನ್ನ ಹೆಂಡತಿ ಮಗುವಿನ ಥರ ಅಂದ್ರಲ್ಲ, ನನ್ನ ಮೇಲೆ ನಿಮ್ಗೆ ಅಷ್ಟೊಂದು ಪ್ರೀತಿನಾ?
ಗಂಡ: ದಿನಾ ಅದ್ಬೇಕು, ಇದ್ಬೇಕು ಅಂತ ಹಟ ಮಾಡ್ತಿರ್ತೀಯಲ್ವಾ ಅದಕ್ಕೆ ಹಾಗಂದೆ.

ಗುಂಡ: ನನ್ ಫೋನಿಗೆ ಬ್ಲ್ಯಾಕ್‌ಮೇಲ್ ಕರೆಗಳು ಬರ್ತಾ ಇವೆ ಸರ್..
ಪೊಲೀಸ್: ಏನಂತ?
ಗುಂಡ: ರೀಚಾರ್ಜ್ ಮಾಡಿಸ್ಲಿಲ್ಲ ಅಂದ್ರೆ ಕನೆಕ್ಷನ್ ಕಟ್ ಮಾಡ್ತೀವಿ ಅಂತ.

ಕನ್ನಡ ಮೇಷ್ಟ್ರು: ಏನೋ ಕೋದಂಡ ಒಂದಕ್ಷರಾನೂ ನೆಟ್ಟಗೆ ಬರಿದಿಲ್ವಲ್ಲೋ?
ಕೋದಂಡ: ನೆಟ್ಟಗೆ ಬರೆದ್ರೆ ಸ್ಟ್ರೈಟ್‌ಲೈನ್ ಆಗುತ್ತೆ ಸರ್!

ಹೆಂಡತಿ: ರೀ ನನಗೆ ಡೈವೋರ್ಸ್ ಕೊಡಿ.
ಗಂಡ: (ಖುಷಿಯಿಂದ) ಯಾವಾಗ ಬೇಕು?
ಹೆಂಡತಿ: ಅಷ್ಟೊಂದು ಖುಷಿ ಪಡಬೇಡಿ. ನಾನ್ ಹೇಳಿದ್ದು ಟೇಬಲ್ ಮೇಲೆ 'ಡೈ' ಚೆಲ್ಲಿದೆ. ಅದನ್ನು 'ವರ್ಸ್' ಕೊಡಿ ಅಂತ.

1970ರಲ್ಲಿ ಮದುವೆ ಆಗುತ್ತಿದ್ದ ಗಂಡು ವರದಕ್ಷಿಣೆಯಾಗಿ ರೇಡಿಯೊ ಬಯಸುತ್ತಿದ್ದ.
1990ರಲ್ಲಿ ಮದುವೆ ಆಗುತ್ತಿದ್ದ ಗಂಡು ವರದಕ್ಷಿಣೆಯಾಗಿ ಟಿ.ವಿ. ಬಯಸುತ್ತಿದ್ದ.
2000ರಲ್ಲಿ ಮದುವೆ ಆಗುತ್ತಿದ್ದ ಗಂಡು ವರದಕ್ಷಿಣೆಯಾಗಿ ಒಂದು ಹೋಂಡಾ ಬೈಕ್ ಬಯಸುತ್ತಿದ್ದ.
2010ರಲ್ಲಿ ಮದುವೆ ಆಗುತ್ತಿದ್ದ ಗಂಡು ವರದಕ್ಷಿಣೆಯಾಗಿ ಒಂದು ಕಾರ್ ಬಯಸುತ್ತಿದ್ದ.
2024ರಲ್ಲಿ ಮದುವೆ ಆಗುವ ಗಂಡು ವರದಕ್ಷಿಣೆಯಾಗಿ ನನಗೆ ಏನೂ ಬೇಡ, 'ಬಾಯ್‌ಫ್ರೆಂಡ್ ಇಲ್ಲದ ಒಬ್ಬ ಹುಡುಗಿ ನನಗೆ ಹೆಂಡತಿಯಾಗಿ ದೊರೆತರೆ ಸಾಕು' ಎನ್ನುತ್ತಿದ್ದಾನೆ.

ಸಂಗ್ರಹ: ಶರದ ಕುಲಕರ್ಣಿ, ಬೀದರ್